ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 681(228)

ಸದಸ್ಯರ ಹೆಸರು : ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ)

ಉತ್ತರಿಸುವ ಸಚಿವರು : ಶ್ರೀ ಕೆ.ಎಚ್.ರಂಗನಾಥ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ. ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಹೊರಬರುವ ಕಪ್ಪು ಕಣಗಳಿಂದ ಪರಿಸರ ಮಾಲಿನ್ಯವಾಗುತ್ತಿದ್ದು ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಮಾಲಿನ್ಯ ನಿವಾರಣೋಪಾಯ ಹಾಗೂ ಮಾಲಿನ್ಯ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉತ್ತರ

ಅ. ಬಂದಿದೆ.

ಆ. ಮೈಸೂರು ಸಕ್ಕರೆ ಕಾರ್ಖಾನೆಯು ವಾಯು ಮಾಲಿನ್ಯಕಾರಕಗಳನ್ನು ನಿಯಂತ್ರಣವಿಲ್ಲದೆ ಚಿಮಣಿಗಳಿಂದ 1992ರವರೆವಿಗೂ ವಿಸರ್ಜಿಸುತ್ತಿತ್ತು. 1993ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಚಿಮಣಿಗಳಿಂದ ಹೊರಬರುವ ಧೂಳಿನ ಸಾಂದ್ರತೆಯ ಮಟ್ಟವನ್ನು ಹಿಂದೆ ಇದ್ದ 350mg/NM3 ಅನ್ನು 150mg/NM3ಕ್ಕೆ ಇಳಿಸಿತು. ತರುವಾಯ ಉದ್ದಿಮೆಯ ವಾಯುಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿರುತ್ತದೆ. ಆದಾಗ್ಯೂ ಉದ್ದಿಮೆಯು ಮಂಡಳಿಯು ನಿಗಧಿಪಡಿಸಿರುವ ಮಾನಕಗಳ ಗುಣಮಟ್ಟಕ್ಕೆ ಧೂಳಿನ ಪ್ರಮಾಣವನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ. ಈಕಾರಣ ದಿನಾಂಕ 7-2-98ರಲ್ಲಿ ಮಂಡಳಿಯು ಉದ್ದಿಮೆಗೆ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಿ ಉದ್ದಿಮೆಯ ಚಟುವಟಿಕೆಗಳಿಂದ ಕಾನೂನಿನ ಉಲ್ಲಂಘನೆಯಾಗಿರುವುದರಿಂದ ಏಕೆ ಮುಚ್ಚಬಾರದೆಂದು ಪ್ರಶ್ನಿಸಿತ್ತು. ಹಾಗೂ ದಿನಾಂಕ:7-8-2001ರಂದು ಉದ್ದಿಮೆಗೆ ವಾಯು ಕಾಯ್ದೆಯಡಿಯಲ್ಲಿ 30-06-2002ರ ವರೆಗಿನ ಪರವಾನಿಗೆಯನ್ನು ನಿರಾಕರಿಸಲಾಗಿದೆ.

ಈ ಮಧ್ಯೆ ಉದ್ದಿಮೆಯು 1999ರ ಡಿಸೆಂಬರ್ ತಿಂಗಳಿನಲ್ಲಿ ಸಹ ವಿದ್ಯುತ್ ಉತ್ಪಾದನಾ

ಘಟಕಗಳನ್ನು (ಕೋ-ಜೆನೆರೇಷನ್ ಪ್ಲಾನ್ಟ್) ಅತ್ಯಾಧುನಿಕ ವಾಯು ಮಾಲಿನ್ಯ ನಿಯಂತ್ರಣ ಘಟಕಗಳೊಂದಿಗೆ ಸ್ಥಾಪಿಸಲು ಮಂಡಳಿಯು ಒಪ್ಪಿಗೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿತ್ತು. ಮಂಡಳಿಯು ಈ ಪ್ರಸ್ತಾವನೆಗೆ ದಿನಾಂಕ:31-8-2000ರಂದು ಒಪ್ಪಿಗೆ ನೀಡಿದೆ. ಈ ಯೋಜನೆ ಕಾಮಗಾರಿಗಳನ್ನು ಉದ್ದಿಮೆಯು ಇನ್ನೂ ಕೈಗೆತ್ತಿಕೊಳ್ಳಬೇಕಿದೆ.

ಈ ಮಧ್ಯೆ ಮಂಡಳಿಯು ಉದ್ದಿಮೆಯ ವಿರುದ್ಧ ಮಂಡ್ಯದ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಿನಾಂಕ.29-7-27ರಂದು ಉದ್ದಿಮೆಯು ಮಂಡಳಿಯ ನಿಬಂಧನೆಗಳನ್ನು ಅನುಸರಿಸದ ಕಾರಣ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿದ್ದು ಈ ಮೊಕದ್ದಮೆ ಈಗ ಪ್ರಗತಿಯಲ್ಲಿದೆ.

ಮಂಡ್ಯದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮತ್ತು ಮಂಡ್ಯ ತಾಲ್ಲೂಕು ಕಛೇರಿಯಲ್ಲಿ ಗಣಕೀಕರಣ.

ಚುಕ್ಕೆ ಗುರುತಿಲ್ಲದ LA ಪ್ರಶ್ನೆ ಸಂಖ್ಯೆ : 682(232)

ಸದಸ್ಯರ ಹೆಸರು : ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1. ಮಂಡ್ಯ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಮಿನಿ ವಿಧಾನ ಸೌಧದ ನಿರ್ಮಾಣದ ಬಗೆಗೆ ಸರ್ಕಾರ ಕೈಗೊಂಡ ಕ್ರಮವೇನು?

3. ಮಂಡ್ಯ ತಾಲ್ಲೂಕಿನ ಕಛೇರಿಯಲ್ಲಿನ ಗಣಕೀಕರಣ ಕಾರ್ಯವು ಯಾವ ಹಂತದಲ್ಲಿದೆ?

4. ಯಾವಾಗ ಪೂರ್ಣಗೊಳಿಸಲಾಗುವುದು?